ಹಜಾರೆ ಫೌಂಡೇಶನ್‌ದ

# ಪದ್ಮಾವತಿ ಅಂತರಾಷ್ಟ್ರೀಯ ಶಾಲೆ ಹೊಸೂರ-ರಬಕವಿ

## ಪ್ರಥಮ ನಿಯತಕಾಲಿಕ ಪರೀಕ್ಷೆ, ಅಕ್ಟೋಬರ್-೨೦೨೦

## ಕನ್ನಡ(೯)

ದಿನಾಂಕ: ೨೪/೧೦/೨೦೨೦ ಅಂಕಗಳು:೮೦ ಸಮಯ: ೩ಗಂಟೆ

---

*ಸೂಚನೆಗಳು

*ಪ್ರಶ್ನೆ ಪತ್ರಿಕೆಯಲ್ಲಿ ಎ ಮತ್ತು ಬಿ ಎಂದು ಒಟ್ಟು ಎರಡು ಭಾಗಗಳಿರುತ್ತವೆ.
*ಒಟ್ಟು ೧೭ ಮುಖ್ಯ ಪ್ರಶ್ನೆಗಳಿರುತ್ತವೆ.
*ಪ್ರತಿಯೊಂದು ಪ್ರಶ್ನೆಗಳ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಉತ್ತರಿಸಿ.
*ಮುಖ್ಯ ಪ್ರಶ್ನೆ ಹಾಗೂ ಉಪಪ್ರಶ್ನೆ ತಪ್ಪಿಲ್ಲದೆ ಬರೆಯಿರಿ.

## ವಿಭಾಗ-ಎ (೪೦ ಅಂಕಗಳು)

### (ವಾಚನ ಮತ್ತು ಗ್ರಹಿಕಾ ಕೌಶಲ್ಯ =೧೦ ಅಂಕಗಳು)

**ಪ್ರಶ್ನೆ ೧. ಗದ್ಯಭಾಗವನ್ನು ಗಮನವಿಟ್ಟು ಓದಿಕೊಂಡು, ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** ೫

ಅಗಸರ ಸೋಮ ಒಂದು ನಾಯಿಯನ್ನು ಒಂದು ಕತ್ತೆಯನ್ನೂ ಸಾಕಿದ್ದನು. ಒಂದು ದಿನ ಏನೋ ಕಾರಣದಿಂದ ಸೋಮ ನಾಯಿಗೆ ಚೆನ್ನಾಗಿ ಹೊಡೆದಿದ್ದನು. ಆದ್ದರಿಂದ ನಾಯಿ, ಮನಸ್ಸಿನಲ್ಲೇ ತನ್ನ ಯಜಮಾನನ ಮೇಲೆ ಬಹಳ ಕೋಪಗೊಂಡಿತ್ತು. ನಾಯಿಯು ಏಟುತಿಂದ ದಿನದ ರಾತ್ರಿಯೇ ಕಳ್ಳರು ಸೋಮನ ಹಿತ್ತಲ ಗೋಡೆ ಹಾರಿ ಒಳಗೆ ಬಂದು ಕಳ್ಳರು ನುಗ್ಗಿದರೂ, ನಾಯಿಯು ಯಜಮಾನನ ಮೇಲಿನ ಕೋಪದಿಂದ, ಬೊಗಳದೆ ಸುಮ್ಮನಿತ್ತು. ಆಗ ಅಲ್ಲೇ ಇದ್ದ ಕತ್ತೆ ನಾಯಿಯನ್ನು ಕುರಿತು, "ಏನಯ್ಯಾ, ಕಳ್ಳರು ಮನೆಗೆ ನುಗ್ಗಿದರೂ ನೀನು ಕೂಗಿ ಯಜಮಾನನಿಗೆ ಎಚ್ಚರಿಕೆ ಕೊಡದೆ ಸುಮ್ಮನಿದ್ದೀಯಲ್ಲ, ಏಕೆ?" ಎಂದು ಕೇಳಿತು. ಅದಕ್ಕೆ ನಾಯಿಯು, "ನಾನು ಕೂಗೋದೂ ಇಲ್ಲ- ಗೀಗೋದೂ ಇಲ್ಲ!ಹೋಗು" ಎಂದಿತು. ಯಾಕೆ ಎಂದು ಕತ್ತೆ ಕೇಳಿತು. "ಏಕೆಂದರೆ ಇವತ್ತು ಬೆಳಿಗ್ಗೆ ನನ್ನ ಸೊಂಟ ಮುರಿಯೋ ಹಾಗೆ ಹೊಡೆದಿದ್ದಾನೆ ಯಜಮಾನ. ಅದಕ್ಕೆ ಎಂದು ಇನ್ನೊಂದು ಪಕ್ಕಕ್ಕೆ ಹೊರಳಿ ಮಲಗಿಕೊಂಡಿತು ನಾಯಿ.

ಆಗ ಕತ್ತೆಯು "ಅಯ್ಯೋ! ನಮ್ಮ ಯಜಮಾನನ ಮನೆ ಕೊಳ್ಳೆ ಯಾಗುವುದಲ್ಲಾ! ಹೋಗಲಿ ನಾನಾದರೂ ಕೂಗಿ ಯಜಮಾನನನ್ನು ಎಬ್ಬಿಸುತ್ತೇನೆ." ಎಂದುಕೊಂಡು, ಗಟ್ಟಿಯಾಗಿ ಅರಚಿತು. ಕತ್ತೆಯ ಕರ್ಕಶವಾದ ಕೂಗಿನಿಂದ ಯಜಮಾನನ ಗಾಢ ನಿದ್ರೆಗೆ ಭಂಗವಾಯಿತು. ಈ ಹಾಳು ಕತ್ತೆ ತನ್ನ ನಿದ್ದೆ ಕೆಡಿಸತಲ್ಲಾ ಎಂದು ಅವನಿಗೆ ಬಹಳ ಕೋಪ ಬಂದಿತು. ಅವನು ಆಚೆಗೆ ಬಂದು ,ಅಲ್ಲೇ ಬಿದ್ದಿದ್ದ ದೊಣ್ಣೆಯನ್ನು ತೆಗೆದುಕೊಂಡು, ಕತ್ತೆಯ ಬೆನ್ನಿನ ಮೇಲೆ ಧಡ್‌ಧಡ್ ಎಂದು ನಾಲ್ಕಾರು ಏಟುಕೊಟ್ಟನು. ಈ ಮಧ್ಯೆ ಕಳ್ಳರು ಅವನ ಮನೆಗೆ ನುಗ್ಗಿ ಹಣದ ಪೆಟ್ಟಿಗೆಯನ್ನು ಎತ್ತಿಕೊಂಡು ಪರಾರಿಯಾದರು.

**ಪ್ರಶ್ನೆಗಳು**

೧)ಸೋಮನ ಹಿತ್ತಲ ಗೋಡೆ ಹಾರಿ ಬಂದವರು ಯಾರು?

ಎ)ನಾಯಿ ಬಿ)ಕಳ್ಳರು ಸಿ)ಕತ್ತೆ ಡಿ)ಕೊಲೆಗಾರ

೨) ಸೋಮನು ಯಾವ ಪ್ರಾಣಿಗಳನ್ನು ಸಾಕಿದ್ದನು?

ಎ)ಬೆಕ್ಕು–ಮೊಲ ಬಿ)ಕೋಳಿ–ಗಿಳಿ ಸಿ)ನಾಯಿ–ಕತ್ತೆ ಡಿ)ನಾಯಿ–ಕುದುರೆ

೩) ಯಜಮಾನನ ಮೇಲೆ ಅತಿಯಾಗಿ ಕೋಪಗೊಂಡಿದ್ದ ಪ್ರಾಣಿ ಯಾವುದು?

ಎ)ನಾಯಿ ಬಿ)ಕತ್ತೆ ಸಿ)ಬೆಕ್ಕು ಡಿ)ಮೊಲ

೪) ಯಜಮಾನನ ನಿದ್ದೆಗೆ ಭಂಗ ಉಂಟು ಮಾಡಿದವರು ಯಾರು?

ಎ)ನಾಯಿ ಬಿ)ಕತ್ತೆ ಸಿ)ಬೆಕ್ಕು ಡಿ)ಮೊಲ

೫) "ನಾನು ಕೂಗೋದೂಇಲ್ಲ– ಗಿಗೋದೂಇಲ್ಲ." ಎಂದು ಯಾರು ಹೇಳಿದರು?

ಎ)ಕೋತಿ ಬಿ)ಬೆಕ್ಕು ಸಿ)ಕತ್ತೆ ಡಿ)ನಾಯಿ

**ಪ್ರಶ್ನೆ ೨. ಪದ್ಯಭಾಗವನ್ನು ಗಮನವಿಟ್ಟು ಓದಿಕೊಂಡು, ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** ೫

ತಂದೆತಾಯಿಗಳ ಘನದಿಂದ ವಂದಿಸುವಂಗೆ।
ಬಂದ ಕುತ್ತಗಳು ದೂರಾಗಿ ಸ್ವರ್ಗವದು।
ಮುಂದೆ ಬಂದಕ್ಕು ಸರ್ವಜ್ಞ

ಗುರುಗಳಿಗೆ ಹಿರಿಯರಿಗೆ ಶಿರಬಾಗಿ ಎರಗಿದರೆ।
ನರಸುರರು ಒಲಿದು ಸಿರಿಸುರಿದು ಕೈಲಾಸ।
ಕರತಲಾಮಲಕ ಸರ್ವಜ್ಞ

ವಿದ್ಯೆಯೇ ತಾಯ್ತಂದೆ । ಬುದ್ಧಿ ಸೋದರಮಾವ ।
ಆಪತ್ತಿಗಾದವನೇ ನಂಟ । ಸುಖದಿ ತಾ।
ನಿರ್ದುದೇ ರಾಜ್ಯ ಸರ್ವಜ್ಞ

ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ ।
ಅಲ್ಲದಹುದೆಂಬ ಅಜ್ಞಾನಿಯೊಡನಾಟ ।
ಕಲ್ಲು ಹಾದಂತೆ ಸರ್ವಜ್ಞ

ಒಮ್ಮೆ ಉಂಡವ ತ್ಯಾಗಿ ಇಮ್ಮೆಯುಂಡವ ಭೋಗಿ ।
ಮೂರು ಬಾರಿ ಉಂಡವ ನೆರೆರೋಗಿ ಯೋಗಿತಾ ।
ಸುಮ್ಮಗಿರುತಿಹನು ಸರ್ವಜ್ಞ

**ಪ್ರಶ್ನೆಗಳು :–**

೧) ಯಾವುದು ನಮ್ಮ ತಾಯಿ–ತಂದೆ ಇದ್ದಂತೆ?

ಎ)ಗೆಳೆತನ ಬಿ)ರಕ್ತಸಂಬಂಧ ಸಿ)ವಿದ್ಯೆ ಡಿ)ಹಣ

೨) ನಾವು ಯಾರಿಗೆ ಶಿರಬಾಗಿ ನಮಸ್ಕರಿಸಬೇಕು?

ಎ)ಗುರು–ಹಿರಿಯರಿಗೆ ಬಿ)ಅಣ್ಣನಿಗೆ ಸಿ)ಮಾವನಿಗೆ ಡಿ)ಚಿಕ್ಕಪ್ಪನಿಗೆ

೩) ಎರಡು ಬಾರಿ ಉಂಡವನನ್ನು ಏನೆಂದು ಕರೆಯುತ್ತಾರೆ?

ಎ)ತ್ಯಾಗಿ ಬಿ)ರೋಗಿ ಸಿ)ಭೋಗಿ ಡಿ)ಯೋಗಿ

೪) ಬಲ್ಲವರ ಒಡನಾಟ ಹೇಗಿರುತ್ತದೆ?

ಎ)ಕಷ್ಟವಿರುತ್ತದೆ ಬಿ)ಖುಷಿಯಾಗಿರುತ್ತದೆ ಸಿ)ಕಲ್ಲುಹಾದಂತೆ ಡಿ)ಬೆಲ್ಲ ಮೆದ್ದಂತೆ

೫) ಎಷ್ಟು ಸಾರಿ ಉಂಡವನನ್ನು ರೋಗಿ ಎಂದು ಕರೆಯುತ್ತಾರೆ?

ಎ)ಒಂದುಬಾರಿ ಬಿ)ಎರಡುಬಾರಿ ಸಿ)ಮೂರುಬಾರಿ ಡಿ)ನಾಲ್ಕುಬಾರಿ

## (ಅನ್ವಯಿಕ ವ್ಯಾಕರಣ =೧೬ ಅಂಕಗಳು)

**ಪ್ರಶ್ನೆ ೩. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅದರಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **೪**

೧)'ನೀರ್ವನಿ' ಇದು ಯಾವ ಸಂಧಿಗೆ ಉದಾಹರಣೆಯಾಗಿದೆ?

ಎ)ಆಗಮ ಸಂಧಿ ಬಿ)ಆದೇಶ ಸಂಧಿ ಸಿ)ಸವರ್ಣದೀರ್ಘ ಸಂಧಿ ಡಿ)ಲೋಪ ಸಂಧಿ

೨)'ಕಣ್ಗುರುಡ' ಇದು ಯಾವ ಸಮಾಸಕ್ಕೆ ಉದಾಹರಣೆಯಾಗಿದೆ?

ಎ)ತತ್ಪುರುಷ ಸಮಾಸ ಬಿ)ಕರ್ಮಧಾರಯ ಸಮಾಸ ಸಿ)ಅಂಶೀ ಸಮಾಸ ಡಿ)ಗಮಕ ಸಮಾಸ

೩)'ಧ್ವನಿ' ಇದರ ತದ್ಭವ ರೂಪ ಯಾವುದು?

ಎ)ದನಿ ಬಿ)ಶಬ್ದ ಸಿ)ಕಲರವ ಡಿ)ಧಣಿ

೪)'ನಿತ್ಯ' ಇದಕ್ಕೆ ವಿರುದ್ಧಾರ್ಥಕ ಪದ ಬರೆಯಿರಿ.

ಎ)ಸತ್ಯ ಬಿ)ಮಿಥ್ಯ ಸಿ)ಅನಿತ್ಯ ಡಿ)ಅವನಿತ್ಯ

**ಪ್ರಶ್ನೆ ೪. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅದರಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **೪**

೧)'ನಭ' ಇದರ ಸಮಾನಾರ್ಥಕ ಪದ ಯಾವುದು?

ಎ)ಬಟ್ಟೆ ಬಿ)ಆಕಾಶ ಸಿ)ಹೊಕ್ಕಳು ಡಿ)ಭೂಮಿ

೨)'ಮೆಲ್ಲಮೆಲ್ಲನೆ' ಇದು ಯಾವ ಪದಕ್ಕೆ ಉದಾಹರಣೆಯಾಗಿದೆ?

ಎ)ದ್ವಿರುಕ್ತಿ ಬಿ)ಜೋಡುನುಡಿ ಸಿ)ಅನುಕರಣಾವ್ಯಯ ಡಿ)ನುಡಿಗಟ್ಟು

೩)'ನದಿ' ಇದು ಯಾವ ನಾಮಪದಕ್ಕೆ ಉದಾಹರಣೆಯಾಗಿದೆ?

ಎ)ಅಂಕಿತನಾಮ ಬಿ)ಅನ್ವರ್ಥಕನಾಮ ಸಿ)ಸರ್ವನಾಮ ಡಿ)ರೂಢನಾಮ

೪)'ಮಕ್ಕಳು ಆಟವನ್ನು ಆಡಿದರು.' ಈ ವಾಕ್ಯದಲ್ಲಿರುವ ಕರ್ತೃ ಪದವನ್ನು ಗುರುತಿಸಿ.

ಎ)ಆಟವನ್ನು ಬಿ)ಆಡಿದರು ಸಿ)ಮಕ್ಕಳು ಡಿ)ಕರ್ತೃಪದ ಇಲ್ಲ

**ಪ್ರಶ್ನೆ ೫. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅದರಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **೪**

೧)'ಅದು ಯಾವಾಗಲೂ ಬೊಗಳುತ್ತದೆ.' ಈ ವಾಕ್ಯದಲ್ಲಿರುವ ಸರ್ವನಾಮವನ್ನು ಗುರುತಿಸಿ.

ಎ)ಅದು ಬಿ)ಬೊಗಳುತ್ತದೆ ಸಿ)ಯಾವಾಗಲೂ ಡಿ)ಯಾವುದೂ ಅಲ್ಲ

೨)'ಗೆದ್ದಳು' ಇದನ್ನು ಭವಿಷತ್ ಕಾಲಕ್ಕೆ ಪರಿವರ್ತಿಸಿ.

ಎ)ಗೆದ್ದಾಳು ಬಿ)ಗೆಲ್ಲುವಳು ಸಿ)ಗೆಲ್ಲುತ್ತಾಳೆ ಡಿ) ಗೆಲ್ಲಳು

೩)'ಕವಿಗಳು ಕವಿತೆಯನ್ನು ರಚಿಸಿದರು.' ಇದನ್ನು ಕರ್ಮಣಿ ವಾಕ್ಯವನ್ನಾಗಿ ಬದಲಾಯಿಸಿ.

ಎ)ಕವಿತೆಯನ್ನು ಕವಿಯು ರಚಿಸಿದನು. ಬಿ)ಕವಿ ಕವಿತೆ ರಚಿಸಿದ.

ಸಿ)ಕವಿತೆಯು ಕವಿಗಳಿಂದ ರಚಿಸಲ್ಪಟ್ಟಿತು. ಡಿ)ಕವಿ ಕವಿತೆ ರಚಿಸಲಿ.

೪)'ಮಾತು ಆಡಿದರೆ ಹೋಯಿತು;------. ಈ ಗಾದೆಯನ್ನು ಪೂರ್ಣಗೊಳಿಸಿ.

ಎ)ಕಾಲ ಕಳೆದರೆ ಆಯಿತು. ಬಿ)ಮುತ್ತು ಒಡೆದರೆ ಹೋಯಿತು.

ಸಿ)ಊಟ ಮಾಡಿದರೆ ಮುಗಿಯಿತು. ಡಿ)ನಡತೆ ಕೆಟ್ಟರೆ ಹೋಯಿತು.

**ಪ್ರಶ್ನೆ ೬. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅದರಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **೪**

೧)'ಬರೆಯನು' ಈ ಪದ ಯಾವುದಕ್ಕೆ ಉದಾಹರಣೆಯಾಗಿದೆ?

ಎ)ನಿಷೇಧಾರ್ಥಕ ಬಿ)ಸಂಭವನಾರ್ಥಕ ಸಿ)ವಿಧ್ಯರ್ಥಕ ಡಿ)ಪ್ರಶ್ನಾರ್ಥಕ

೨)'ವಿದ್ಯಾರ್ಥಿಗಳು ಚೆನ್ನಾಗಿ ಹಾಡಲಿ' ಈ ವಾಕ್ಯ ಯಾವುದಕ್ಕೆ ಉದಾಹರಣೆಯಾಗಿದೆ?

ಎ)ನಿಷೇಧಾರ್ಥಕ ಬಿ)ಸಂಭವನಾರ್ಥಕ ಸಿ)ವಿಧ್ಯರ್ಥಕ ಡಿ)ಪ್ರಶ್ನಾರ್ಥಕ

೩)'ಅರಸರಿಂ' ಇದರಲ್ಲಿ ಯಾವ ವಿಭಕ್ತಿ ಪ್ರತ್ಯಯವಿದೆ?

ಎ)ಪ್ರಥಮಾ ಬಿ)ದ್ವಿತೀಯಾ ಸಿ)ತೃತೀಯಾ ಡಿ)ಷಷ್ಠಿ

೪)'ತಪಶ್ಶಕ್ತಿ' ಇದು ಯಾವ ಸಂಧಿಗೆ ಉದಾಹರಣೆಯಾಗಿದೆ?

ಎ)ಯಣ್ ಸಂಧಿ ಬಿ)ಜಶ್ತ್ವ ಸಂಧಿ ಸಿ)ಶ್ಚುತ್ವ ಸಂಧಿ ಡಿ)ಅನುನಾಸಿಕ ಸಂಧಿ

**(ಬಹು ಆಯ್ಕೆ ಪೆಶ್ನೆ- ಪಠ್ಯಗಳ ಅಧ್ಯಯನ =೧೪ ಅಂಕಗಳು)**

**ಪ್ರಶ್ನೆ ೭. ಪಠ್ಯದಲ್ಲಿನ ಪರಿಚಿತ ಪದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **೪**

ನವಭಾವ ನವಜೀವ ನವಶಕ್ತಿ ತುಂಬಿಸುವ
ಹಾಡೊಮ್ಮೆ ಹಾಡಬೇಕು;
ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ
ವೀರಧ್ವನಿಯೇರಬೇಕು;
ಜಾತಿ ಕುಲ ಮತ ಧರ್ಮ ಪಾಶಗಳ ಕಡಿದೊಗೆದು
ಎದೆಹಿಗ್ಗಿ ಹಾಡಬೇಕು;
ಯುಗಯುಗಗಳಾಚೆಯಲಿ ಲೋಕಲೋಕಾಂತದಲಿ
ಆ ಹಾಡು ಗುಡುಗಬೇಕು;
ಉನ್ನತೋನ್ನತ ಘನ ಹಿಮಾದ್ರಿ ಶಿಖರವನೇರಿ
ಹಾಡಲ್ಲಿ ಹಾಡಬೇಕು;
ಹಾಡು ನುಡಿಗುಂಡುಗಳು ಹಾರಿ ದಶದಿಕ್ಕಿನಲಿ
ಭಯದ ಬೆನ್ನಟ್ಟಬೇಕು;
ಗಂಡೆದೆಯ ಗರ್ಜನೆಗೆ ಮೂವತ್ತು ಮೂಕೋಟಿ
ಕಲಕಂಠ ಬೆರೆಸಬೇಕು;
ಭೂಮ್ಯಂತರಾಳದಲಿ ನಭಚಕ್ರಗೋಳದಲಿ
ಮಾರ್ದನಿಗಳೇಳಬೇಕು;

**ಪ್ರಶ್ನೆಗಳು:-**

೧) ಕಡಿದೊಗೆಯಬೇಕಾದ ಪಾಶಗಳು ಯಾವುವು?

ಎ)ಸತ್ಯ-ಧರ್ಮ ಬಿ)ಜಾತಿ-ಕುಲ ಸಿ)ಪ್ರೀತಿ-ವಿಶ್ವಾಸ ಡಿ)ರಾಗ-ತಾಳ

೨) ಹಾಡು ನುಡುಗುಂಡುಗಳು ಯಾವುದರ ಬೆನ್ನಟ್ಟಬೇಕು?

ಎ)ಭಯದ ಬಿ)ವೈರಿಯ ಸಿ)ಸೋಲಿನ ಡಿ)ಮಿತ್ರನ

೩) ‘ಕಲಕಂಠ’ ಪದದ ಅರ್ಥವೇನು?

ಎ)ತೊಂದರೆ ಬಿ)ಕರ್ಕಶ ಸಿ)ಕಠಿಣ ಡಿ)ಇಂಪಾದ ಧ್ವನಿ

೪) ಯಾವ ಭಾವನೆಯ ತೆರೆ ಮಸಗಬೇಕು?

ಎ)ಸೌಮ್ಯ ಬಿ)ನಿಧಾನ ಸಿ)ಗಂಭೀರ ಡಿ)ಹಾಸ್ಯ

**ಪ್ರಶ್ನೆ ೮. ಪಠ್ಯದಲ್ಲಿನ ಪರಿಚಿತ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಪದವನ್ನು ಆರಿಸಿ ಬರೆಯಿರಿ. ೫**

ನಾನು ಪ್ರಯಾಣಿಸುತ್ತಿದ್ದ ಬಸ್ಸಿಗೆ ಒಬ್ಬ ಮುಸಲ್ಮಾನ ಹತ್ತಿದ. ವಯಸ್ಸು ಸುಮಾರು ೫೫ ರಿಂದ ೫೮ ಇದ್ದಿರಬಹುದು. ಆಜಾನುಬಾಹುವಾಗಿ ಪುಷ್ಟವಾಗಿ ಬೆಳೆದಿದ್ದ ಎತ್ತರದ ಕೆಂಪನೆಯ ಆಳು. ಮುಖದಲ್ಲಿ ಸಹ ಒಳ್ಳೆಯ ಕಳೆ ಇತ್ತು. ಕಣ್ಣಿನ ದೃಷ್ಟಿ ತೀಕ್ಷ್ಣವಾಗಿತ್ತು. ಗಡ್ಡ ಪೂರ್ಣವಾಗಿ ಬೆಳ್ಳಗಾಗಿ ಶುದ್ಧಿ ಮಾಡಿದ ಹತ್ತಿಯ ತುಪ್ಪಳದಂತೆ ತೋರುತ್ತಿತ್ತು. ವಿಶಾಲವಾದ ಹಣೆ, ಗಂಭೀರವಾದ ಮುಖ, ಮಡಿ-ಮಡಿ ಇಸ್ತ್ರೀ ಮಾಡಿದ್ದ ಬಿಳಿಯ ಶರಾಯಿ(ಕೋಟು) ಇವುಗಳಿಂದ ಆತನನ್ನು ನೋಡುವವರಿಗೆಇವನೊಬ್ಬ ಮರ್ಯಾದಸ್ತ ಸದ್ಗೃಹಸ್ಥ ಎಂಬ ಭಾವನೆ ಉಂಟಾಗುತ್ತಿತ್ತು. ಆತನನ್ನು ಯಾರೂ ನೋಡಿದರೂ ಇನ್ನೂ ಐದು ಘಳಿಗೆ ನಿಂತು ನೋಡೋಣ ಎಂಬಂತೆ ಅವನ ಆಕೃತಿ ಇದ್ದರೂ ನನ್ನನ್ನು ಮತ್ತಷ್ಟು ಹೆಚ್ಚಾಗಿ ಅವನ ಕಡೆಗೆ ಆಕರ್ಷಿಸಿದ್ದು ಆ ಗೃಹಸ್ಥನ ಕೈಲಿದ್ದ ಒಂದು ದೊಡ್ಡ ಪುಸ್ತಕ.

ಆ ಪುಸ್ತಕವನ್ನು ನೋಡಿದ ಕೂಡಲೇ ಅದು ಕುಮಾರವ್ಯಾಸ ಭಾರತವಿರಬೇಕೆಂದು ನನಗೆ ಗೊತ್ತಾಯಿತು. ಹದಿನಾರನೆಯ ಮುಸಲ್ಮಾನ ಮೌಲ್ವಿಯಂತೆಯೇ ಕಾಣುತ್ತಿದ್ದ ಇವನ ಕೈಯಲ್ಲಿ ಕುಮಾರವ್ಯಾಸ ಭಾರತವೇ? ಅದು ಕುಮಾರವ್ಯಾಸ ಭಾರತವೇ ತಾನೇ ಎಂಬ ಕುತೂಹಲ ನನ್ನಲ್ಲಿ ಪೂರ್ತಿ ಉಂಟಾಗಿತ್ತು. ನಾನು ಬಗ್ಗಿ ಆ ಪುಸ್ತಕವನ್ನು ನೋಡಿದೆ. ಹೌದು ನಿಜವಾಗಿಯೂ ಕುಮಾರವ್ಯಾಸ ಭಾರತವೇ.

**ಪ್ರಶ್ನೆಗಳು:-**

೧)ಮುಸಲ್ಮಾನನ ಗಡ್ಡವನ್ನು ಯಾವುದಕ್ಕೆ ಹೋಲಿಸಲಾಗಿದೆ?

ಎ)ಕುರಿಗೆ ಬಿ)ಹತ್ತಿಗೆ ಸಿ)ಹೊದಿಕೆಗೆ ಡಿ)ದಾರಕ್ಕೆ

೨)ಲೇಖಕರು ಮತ್ತು ಮುಸಲ್ಮಾನ ಯಾವುದರಲ್ಲಿ ಪ್ರಯಾಣಿಸುತ್ತಿದ್ದರು?

ಎ)ಬಸ್ಸಿನಲ್ಲಿ ಬಿ)ರೈಲಿನಲ್ಲಿ ಸಿ)ವಿಮಾನದಲ್ಲಿ ಡಿ)ಆಟೋದಲ್ಲಿ

೩)ಮುಸಲ್ಮಾನನ ವಯಸ್ಸು ಎಷ್ಟಿರಬಹುದೆಂದು ಲೇಖಕರು ಹೇಳುತ್ತಾರೆ?

ಎ)೪೫-೪೮ ಬಿ)೫೨-೫೫ ಸಿ)೪೨-೪೫ ಡಿ)೫೫-೫೮

೪)‘ಶರಾಯಿ’ ಪದದ ಅರ್ಥವೇನು?

ಎ)ಕೋಟು ಬಿ)ಮದ್ಯ ಸಿ)ರುಮಾಲು ಡಿ)ಪಂಚೆ

೫)ಮುಸಲ್ಮಾನನ ಕೈಯಲ್ಲಿ ಯಾವ ಪುಸ್ತಕ ಇತ್ತು?

ಎ)ರಾಮಾಯಣ ಬಿ)ಭಗವದ್ಗೀತೆ

ಸಿ)ಉಮರನ ಒಸಗೆ ಡಿ)ಕುಮಾರವ್ಯಾಸ ಭಾರತ

**ಪ್ರಶ್ನೆ ೯. ಪಠ್ಯದಲ್ಲಿನ ಪರಿಚಿತ ಪಠ್ಯಪೂರಕ ಅಧ್ಯಯನವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಪದವನ್ನು ಆರಿಸಿ ಬರೆಯಿರಿ. ೫**

ಪತ್ರಿಕೆ ತಿರುವಿದರೆ ಅಫ್ಜಲ್‌ಪುರ ತಾಲೂಕಿನ ದೇವಣಗಾಂವ ಗ್ರಾಮದ ಮುಸ್ಲಿಮೇತರ ಯುವಕರಿಬ್ಬರು ತಿಂಗಳು ಪೂರ್ತಿ ಉಪವಾಸವಿದ್ದ ವರದಿಯಿತ್ತು. ಮುಸ್ಲಿಂ ಬಾಂಧವರು ಮತ್ತು ಈ ಯುವಕರು ಸೇರಿಕೊಂಡೇ ಸಾಯಂಕಾಲ ಬಿಡುತ್ತಿದ್ದರಂತೆ. ಬೀದರ್ ಜಿಲ್ಲೆಯ

ಹುಮನಾಬಾದಿನಲ್ಲಿ ಪ್ರತಿ ವರ್ಷ ಮುಸ್ಲಿಮೇತರ ಗೆಳತಿಯರೆಲ್ಲ ಸೇರಿ, ಮುಸ್ಲಿಂ ಸೋದರಿಯರಿಗೆ ಇಫ್ತಯಾರ್ ಕೂಟ ಏರ್ಪಡಿಸುವ ಪ್ರತೀತಿ ಇದೆ. ರಾಜಕೀಯ ಪಕ್ಷಗಳ ತೋರಿಕೆಯ ಕೂಟದಂತಲ್ಲ, ಹೆಣ್ಣುಮಕ್ಕಳು ಉಲ್ಲಾಸದಿಂದ ಹಾಡಿ ನಲಿದು ಹೃದಯಾಂತರಾಳದಿಂದ ಪರಸ್ಪರ ಸ್ನೇಹ ಹಂಚಿಕೊಳ್ಳುವ ಹೊತ್ತದು. ಸಂತಸದ ಕ್ಷಣಗಳಲ್ಲಿ ಎಲ್ಲರನ್ನೂ ಒಳಗೊಳ್ಳುವ ಪ್ರಜ್ಞೆಯ ಮೂಲಸೆಲೆ ಈ ನಾಡಿನಲ್ಲಿ ಬತ್ತುವುದಿಲ್ಲ. ಎನ್ನುವುದಕ್ಕೆ ಇವೆಲ್ಲ ಘಟನೆಗಳು ಸಾಕ್ಷಿಯಾಗಿವೆ.

ಕ್ಯಾಲೆಂಡರಿನತ್ತ ಕಣ್ಣು ಹಾಯಿಸಿದರೆ ಎರಡನೆಯ ದಿನ ನಾಗರಪಂಚಮಿ ಹಬ್ಬ. ಅಂಗಳದಲ್ಲಿ ನೆರೆದಿದ್ದ ಹೆಂಗೆಳತಿಯರು ತಮ್ಮತಮ್ಮಲ್ಲೇ ಚರ್ಚಿಸುತ್ತಿದ್ದರು. ಗೊರಲಿ ಕಟ್ಟಿದ್ದ ಹುತ್ತದಲ್ಲಿ ಹಾವಿರುವುದೆಂದುಭ್ರಮಿಸಿ, ಹಾಲು ಹಾಕಿ, ಜೋಳದ ಅಳ್ಳು–ಅಳ್ಳಿಟ್ಟು ಚೆಲ್ಲಾಡಿ ನೈವೇದ್ಯ ಕೊಡುವುದು ಅಂತೆಲ್ಲಾ ನೆನಪಿಸಿಕೊಳ್ಳುತ್ತಿದ್ದರು. ಅದರಲ್ಲೊಬ್ಬಳು ಥಟ್ಟನೆ ಬಸವಣ್ಣನ ವಚನ ನೆನಪಿಸಿದಳು. 'ಕಲ್ಲ ನಾಗರ ಕಂಡರೆ ಹಾಲೆರೆ ಎಂಬುವರಯ್ಯ, ದಿಟದ ನಾಗರ ಕಂಡರೆ ಕೊಲ್ಲೆಂಬುವರಯ್ಯ...' ಬಸವಕೇಂದ್ರದವರು ನಾಗರಪಂಚಮಿಯ ದಿನ ಹುತ್ತದ ಹತ್ತಿರ ದೊಡ್ಡ ಬಗೋಣಿಯಿಟ್ಟುಕೊಂಡು 'ಹುತ್ತಕ್ಕೆ ಸುರಿದ ಹಾಲು ಹಾವು ಕುಡಿಯುವುದಿಲ್ಲ' ಎಂದು ಮೈಕಿನಲ್ಲಿ ಹೇಳುತ್ತಾ ಜಾಗೃತಿ ಕಾರ್ಯಕ್ರಮ ನಡೆಸಿದ್ದು ಮತ್ತು ಹಾಲನ್ನು ಬಗೋಣಿಯಲ್ಲಿ ಶೇಖರಿಸಿಕೊಂಡು ಅನಾಥಾಶ್ರಮದ ಮಕ್ಕಳಿಗೆ ಕೊಟ್ಟು ಬಂದಿದ್ದು ನೆನಪಾಯಿತು.

**ಪ್ರಶ್ನೆಗಳು:–**

೧) 'ಹುಮನಾಬಾದ್' ಯಾವ ಜಿಲ್ಲೆಯಲ್ಲಿದೆ?

ಎ)ಹೈದ್ರಾಬಾದ್ ಬಿ)ಚಕ್ಕೋಡಿ ಸಿ)ಬೀದರ್ ಡಿ)ಬಳ್ಳಾರಿ

೨) ಬಸವಕೇಂದ್ರದವರು ಹುತ್ತದ ಹತ್ತಿರ ಏನನ್ನು ಇಟ್ಟಿದ್ದರು?

ಎ)ಪ್ರಸಾದ ಬಿ)ಹಾಲು ಸಿ)ಬಗೋಣಿ ಡಿ)ಹಾವು

೩) ಪತ್ರಿಕೆಯಲ್ಲಿ ಯಾವ ಗ್ರಾಮದ ಸುದ್ದಿ ಇತ್ತು?

ಎ)ದೇವಣಗಾಂವ ಬಿ)ಹುಮನಾಬಾದ್ ಸಿ)ಬೀದರ್ ಡಿ)ಕೋಲಾರ

೪) ಶೇಖರಿಸಿದ ಹಾಲನ್ನು ಯಾರಿಗೆ ಕೊಡುತ್ತಿದ್ದರು?

ಎ)ಹೊಟೇಲಿಗೆ ಬಿ)ಅನಾಥಾಶ್ರಮಕ್ಕೆ ಸಿ)ಗೆಳಯರಿಗೆ ಡಿ)ದೇವರಿಗೆ

೫) ಉಪವಾಸ ಬಿಡುವಾಗ ಹಲವಾರು ಜನ ಮುಸ್ಲಿಂರು ಸೇರಿ ಮಾಡುವ ಕೂಟಕ್ಕೆ ಏನೆಂದು ಕರೆಯುತ್ತಾರೆ?

ಎ)ರೋಜಾ ಬಿ)ಆಸ್ವಾದ ಸಿ)ಇಫ್ತಿಯಾರ್ ಡಿ)ನಮಾಝ್

## ಭಾಗ–ಬಿ (೪೦ ಅಂಕಗಳು)

## (ಬರವಣಿಗೆ ಕೌಶಲ್ಯ) =೧೨ ಅಂಕಗಳು

**ಪ್ರಶ್ನೆ ೧೦. ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯದ ಕುರಿತು ೧೫೦ ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

**೪**

ಎ) ನನ್ನ ನೆಚ್ಚಿನ ಪುಸ್ತಕ

ಬಿ) ಪರಿಸರ ಮಾಲಿನ್ಯ

ಸಿ) ಗ್ರಂಥಾಲಯದ ಮಹತ್ವ

**ಪ್ರಶ್ನೆ ೧೧.** ನೀವು ವಸತಿ ಶಾಲೆಯಲ್ಲಿರುವ ವಿದ್ಯಾರ್ಥಿಯಾಗಿದ್ದು, ನಿಮ್ಮ ಯೋಗಕ್ಷೇಮದ (ಆರೋಗ್ಯ) ಕುರಿತು ನಿಮ್ಮ ತಂದೆಗೆ ಒಂದು ಪತ್ರ ಬರೆಯಿರಿ. ೪

**ಪ್ರಶ್ನೆ ೧೨.** ನಿಮ್ಮ ಶಾಲೆಯಲ್ಲಿ ಆಚರಿಸಿದ **'ವಾರ್ಷಿಕೋತ್ಸವ'**ದ ಕುರಿತು ಒಂದು ಪತ್ರಿಕಾ ವರದಿ ರಚಿಸಿರಿ. ೪

**(ಪಠ್ಯಗಳ ಅಧ್ಯಯನ =೨೮ ಅಂಕಗಳು)**

**ಪ್ರಶ್ನೆ ೧೩. ಈ ಕೆಳಗಿನ ಪ್ರಶ್ನೆಗಳಿಗೆ ೩/೪ ವಾಕ್ಯಗಳಲ್ಲಿ ಉತ್ತರಿಸಿ.** **೮**

೧) ಪಾರಿವಾಳ ಆನಂದಕ್ಕೆ ಕಾರಣವೇನು?

೨) ಪಂಡರಿಬಾಯಿಯವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು?

೩) ಮೌಲ್ವಿಯ ವಿದ್ಯಾಭ್ಯಾಸ ಹೇಗಾಯಿತು?

೪) ಜಯಪುರ ಬೀದಿ ಹಾಗೂ ಮನೆಗಳ ಸೌಂದರ್ಯವನ್ನು ವಿವರಿಸಿ.

**ಪ್ರಶ್ನೆ ೧೪. ಈ ಕೆಳಗಿನ ಪ್ರಶ್ನೆಗಳಿಗೆ ೫/೬ ವಾಕ್ಯಗಳಲ್ಲಿ ಉತ್ತರಿಸಿ.** **೬**

೧) ಜಂತ್ರ-ಮಂತ್ರದ ವಿಶೇಷತೆಯನ್ನು ಪರಿಚಯ ಮಾಡಿಕೊಡಿ.

೨) ಗೊರೂರು ಹಾಗೂ ಮೌಲ್ವಿಯ ನಡುವೆ ನಡೆದ ಸಂಭಾಷಣೆಯನ್ನು ಸಂಕ್ಷೇಪಿಸಿ ಬರೆಯಿರಿ.

**ಪ್ರಶ್ನೆ ೧೫. ಈ ಕೆಳಗಿನ ವಾಕ್ಯಗಳನ್ನು ಸಂದರ್ಭ, ಸ್ವಾರಸ್ಯದೊಂದಿಗೆ ವಿವರಿಸಿ** **೬**

೧) "ಜಡನಿದ್ರೆ ಸಿಡಿದೆದ್ದ ವೀರಾಟ್ಟಹಾಸದಲಿ ಬಾನು ಬುವಿ ಬೆಳಗಬೇಕು."

೨) "ಒಳಗೆ ಬಂದಿತು ಬಳಿಗೆ ಬಿಕ್ಕಿ ಬಿಕ್ಕಿ."

**ಪ್ರಶ್ನೆ ೧೬. ಈ ಕೆಳಗಿನ ಪ್ರಶ್ನೆಗಳಿಗೆ ೮/೧೦ ವಾಕ್ಯಗಳಲ್ಲಿ ಉತ್ತರಿಸಿ.** **೪**

೧) ಜಯಪುರ ಜನರಿಗೆ ಬಣ್ಣಗಳ ಬಗೆಗೆ ಇರುವ ಮೋಹವನ್ನು ತಿಳಿಸಿ.

**-:ಅಥವಾ:-**

ಅಂಬೇರ ಬೆಟ್ಟದ ಮೂರು ಅಂತಸ್ತಿನ ಅರಮನೆಯ ಒಳಾಂಗಣ ಚೆಲುವನ್ನು ತಿಳಿಸಿ.

**ಪ್ರಶ್ನೆ ೧೭. ಈ ಕೆಳಗಿನ ಪ್ರಶ್ನೆಗಳಿಗೆ ೮/೧೦ ವಾಕ್ಯಗಳಲ್ಲಿ ಉತ್ತರಿಸಿ.** **೪**

೧) ಜೋಡಿ ಪಾರಿವಾಳಗಳ ದುಡುಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು?

**-:ಅಥವಾ:-**

'ಪಾರಿವಾಳ, ಪದ್ಯದ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.